ಶೂನ್ಯವೇಳೆಯಲ್ಲಿ ಮಾನ್ಯ ಬೃಹತ್ ಜಲಸಂಪನ್ಮೂಲ ಸಚಿವರು ಗಮನವನ್ನು ಸೆಳೆಯಲು ಬಯಸುತ್ತೇನೆ.

ಶ್ರೀ ಗೋವಿಂದ ಎಂ.ಕಾರಜೋಳ (ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಸಚಿವರು) : ಮಾನ್ಯ ಅಧ್ಯಕ್ಷರೆ, ಜಮಖಂಡಿಯ ಶಾಸಕರಾದಂತಹ ಮಾನ್ಯ ಶ್ರೀ ಶ್ರೀಕಾಂತ್ ಕುಲಕರ್ಣಿಯವರು ಕೃಷ್ಣಾ ನದಿ ಪಕ್ಕದಲ್ಲಿರತಕ್ಕಂಥ ಹಳ್ಳಿಗಳಲ್ಲಿ ಅತಿಯಾದಣತಹ ನೀರಿನ ಬಳಕೆಯಿಂದ ರೈತರ ಭೂಮಿ ಕೆಟ್ಟು ಹೋಗಿದೆ, ಸವಳು–ಜವಳು ಆಗಿದೆ ಎನ್ನುವುದಕ್ಕೆ ಸರ್ಕಾರದ ಗಮನಕ್ಕೆ ತಂದಿದ್ದಾರೆ. 2013–14ನೇ ಸಾಲಿನಲ್ಲಿ ಸವಳು–ಜವಳು ಕಾರ್ಯಕ್ರಮಕ್ಕೆ ಹೆಚ್ಚಿನ ಅನುದಾನವನ್ನು ಕೂಟ್ಟು, ಮುಂದಿನ ವರ್ಷ, ಅಂದರೆ ಏಪ್ರಿಲ್ ಒಂದರ ನಂತರ ಏನು ಹೊಸ ವರ್ಷ ಪ್ರಾರಂಭವಾಗುತ್ತದೆ ಅದರಲ್ಲಿ ಕಯಗೊಳ್ಳುವುದಕ್ಕೆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಶ್ರೀ ಗೋಪಾಲ ಭಂಡಾರಿಯವರು ಮಾತನಾಡುವುದು.

5. ವಿಷಯ : ಉಡುಪಿ ಜಿಲ್ಲೆಯ ಹೆಬ್ರಿಯನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡುವ ಬಗ್ಗೆ.

ಶ್ರೀ ಹೆಚ್.ಗೋಪಾಲ ಭಂಡಾರಿ (ಕಾರ್ಕಳ) : ಮಾನ್ಯ ಅಧ್ಯಕ್ಷರೆ, ನಮ್ಮ ಉಡುಪಿ ಜಿಲ್ಲೆಯ ಹೆಬ್ರಿಯನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡಬೇಕೆಂದು ಕಳೆದ 30 ವರ್ಷಗಳಿಂದ ಆ ಭಾಗದ ಜನ ಹೋರಾಟ ಮಾಡುತ್ತಿದ್ದಾರೆ. ಕಾರ್ಕಳ ತಾಲ್ಲೂಕಿನ ಕೊನೆಯ ಗ್ರಾಮದಲ್ಲಿರುವಂತಹ ಹೆಬ್ರಿ, ಅದರ ಸುತ್ತಮುತ್ತಲಿನ ತಾಲ್ಲೂಕು ಕೇಂದ್ರಗಳಿಗೆ ಹೋಗಬೇಕಾದರೆ ಕನಿಷ್ಟ 35 ಕಿ.ಮೀ.ಗಳಷ್ಟು ಹೋಗಬೇಕಾಗುತ್ತದೆ. ಆ ಪ್ರದೇಶದಲ್ಲಿ ತಾಲ್ಲೂಕು ಆಗುವುದೊಂದು ಬಿಟ್ಟು, ತಾಲ್ಲೂಕಿನಲ್ಲಿರತಕ್ಕಂಥ ಎಲ್ಲಾ ವ್ಯವಸ್ಥೆಗಳೂ ಕೂಡ ಇದೆ. ಅಲ್ಲಿ ತಾಲ್ಲೂಕು ಪುನರ್ ರಚನಾ ಸಮಿತಿ ಇದೆ. ಮಾನ್ಯ ಎಂ.ಬಿ. ಪ್ರಕಾಶ್ ಹಾಗೂ ಚಿರಂಜೀವಿ ಸಿಂಗ್‌ರವರ ನೇತೃತ್ವದಲ್ಲಿ ತಾಲ್ಲೂಕು ಪುನರ್ ರಚನಾ ಸಮಿತಿ ಆಯಿತು. ಆ ಸಮಿತಿ ನಮ್ಮ ಜಿಲ್ಲೆಗೆ ಭೇಟಿ ಕೊಟ್ಟಿದೆ. ನಾವೆಲ್ಲರೂ ಕೂಡ ಮನವಿಯನ್ನು ಸಲ್ಲಿಸಿದ್ದೇವೆ. ಆ ಮನವಿಯ ಪ್ರಕಾರ ಮಾನ್ಯ ಅಧ್ಯಕ್ಷರೆ, ಸರ್ಕಾರಕ್ಕೆ ಒಂದು ವರದಿಯನ್ನು ಕೊಟ್ಟಿದ್ದೇವೆ. ಆ ವರದಿಯಲ್ಲಿ ಸ್ಪಷ್ಟವಾಗಿ ಉಲ್ಲೇಖ ಮಾಡಲಾಗಿದೆ 23 ಪುಟಗಳಷ್ಟು

ಹೆಬ್ರಿಯನ್ನು ತಾಲ್ಲೂಕು ಮಾಡಬೇಕೆಂದು ವರದಿಯಲ್ಲಿ ಬರೆದಿದ್ದಾರೆ. ಮಲೆನಾಡು ಪ್ರದೇಶ ಇದೆ. ನಕ್ಸಲ್ ಪ್ರದೇಶ ಇದೆ. ಆದ್ದರಿಂದ ಅದನ್ನು ತಾಲ್ಲೂಕನ್ನಾಗಿ ಮಾಡಬೇಕೆಂದು ವರದಿಯಲ್ಲಿ ಸ್ಪಷ್ಟ ಉಲ್ಲೇಕವಿದೆ. ನಮ್ಮ ಜಿಲ್ಲೆಯಲ್ಲಿ ತಾಲ್ಲೂಕನ್ನಾಗಿ ಮಾಡಬೇಕು ಎಂದು ಇರುವಂಥದ್ದು ಹೆಬ್ರಿ ಮಾತ್ರ. ಆದರೆ ಬಹಳ ಬೇಸರವಾದಂತಹ ವಿಚಾರವೆಂದರೆ, ಮಾನ್ಯ ಮುಖ್ಯಮಂತ್ರಿಯವರು ಮೊನ್ನೆ ಬಜೆಟ್ ಅನ್ನು ಮಂಡನೆ ಮಾಡುವಾಗ, ಕೆಲವಷ್ಟು ತಾಲ್ಲೂಕುಗಳನ್ನು ಮಾಡತಕ್ಕಂಥ ಪ್ರಸ್ತಾವವನ್ನು ಹೇಳಿದರು. ಆದರೆ ಅದರಲ್ಲಿ ಹೆಬ್ರಿಯ ಪ್ರಸ್ತಾವವೇ ಇಲ್ಲ. ಬಹುಶಃ ಯಾವುದನ್ನು ತಾಲ್ಲೂಕು ಮಾಡಬೇಕೆಂದು ಒಂದು ಪರಿಣತರ ಸಮಿತಿ ವರದಿಯನ್ನು ಕೊಟ್ಟಿದೆ ಆ ವರದಿಯ ಬಗ್ಗೆ ಉಲ್ಲೇಖವೇ ಇಲ್ಲ. ಸರ್ಕಾರ ಈ ವರದಿಯನ್ನು ನೋಡಿದೆಯೋ ಇಲ್ಲವೋ ಎನ್ನುವುದು ನನ್ನ ಸಂಶಯ. ಅದರ ಜೊತೆಗೆ ಬಹುಶಃ ಇಷ್ಟು ಗಂಭೀರವಾಗಿ ಆಗಲೇ ಬೇಕಾದಂತಹ ಪ್ರದೇಶವನ್ನು ಬಿಡಬೇಕಾದರೆ, ಅದರ ಹಿಂದೆ ಏನದರೂ ರಾಜಕೀಯ ಉದ್ದೇಶವಿದೆಯೇ ಅಥವಾ ಏನಾದರೂ ಕಾಣದ ಕೈಗಳ ಹಸ್ತಕ್ಷೇಪವಿದೆಯೇ ಎನ್ನುವ ಸಂಶಯ ನನಗೆ ಬರುತ್ತದೆ. ಮಾನ್ಯ ಮುಖ್ಯಮಂತ್ರಿಯವರಲ್ಲಿ ನನ್ನ ವಿನಂತಿಯನ್ನು ಮಾಡುತ್ತಿದ್ದೇನೆ. ಇದು ಅರ್ಹತೆ ಇರತಕ್ಕಂಥದ್ದು ನೀವು ಎಷ್ಟು ತಾಲ್ಲೂಕನ್ನಾದರೂ ಮಾಡಿ ನನ್ನ ಆಕ್ಷೇಪವಿಲ್ಲ. ಇನ್ನಷ್ಟು ತಾಲ್ಲೂಕುಗಳನ್ನು ಮಾಡಿ ನನ್ನ ಆಕ್ಷೇಪವಿಲ್ಲ. ಆದರೆ ತಾಲ್ಲೂಕು ಮಾಡಲು ವರದಿಯಲ್ಲಿ ಕೊಟ್ಟಿದ್ದನ್ನು ಬಿಟ್ಟಿದ್ದು, ಖಂಡಿತ ವಿಷಾದನೀಯ. ಇದನ್ನು ಸೇರಿಸಬೇಕು. ಬಜೆಟ್ ಅನುಮೋದನೆಯ ಮುಂಚೆಯೇ ಇದನ್ನು ಸೇರಿಸುತ್ತೇವೆ ಎನ್ನುವ ಉತ್ತರ ನನಗೆ ಕೊಡಬೇಕೆಂದು ವಿನಂತಿ ಮಾಡುತ್ತೇನೆ.

ಆಭಾಗದಲ್ಲಿ ಜನರು ಬಂದ್ ಮಾಡಿ ಹೋರಾಟ ಮಾಡಿದ್ದಾರೆ. ಅಲ್ಲಿ ಸತ್ಯಾಗ್ರಹ ನಡೆಯುತ್ತಿದೆ ದಯವಿಟ್ಟು ಅದಕ್ಕೆ ಅವಕಾಶವನ್ನು ಕೊಡಬಾರದು.

ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ ಬೆಳಿಗ್ಗೆಯೇ ಗೋಪಾಲಭಂಡಾರಿಯವರು, ಅಭಯಚಂದ್ರರವರು ಸದನಕ್ಕೆ ಬಂದು ಅಲ್ಲಿಂದಲೇ ಫೋಟೋ ಇಟ್ಟುಕೊಂಡು ಎಲ್ಲಾ ಕಡೆಗಳಿಗೆ ತೋರಿಸಿ ಈ ಸದನ ಮಾತ್ರವಲ್ಲದೆ ಇಡೀ ರಾಜ್ಯದ ಗಮನವನ್ನು ಸೆಳೆದಿದ್ದಾರೆ. ಅವರಿಗೆ

ಮುಲ್ಕಿ ತಾಲ್ಲೂಕು ಆಗಬೇಕು. ಶ್ರೀ ಗೋಪಾಲ ಭಂಡಾರಿಯವರಿಗೆ ಹೆಬ್ರಿ ತಾಲ್ಲೂಕು ಆಗಬೇಕು.

ಶ್ರೀ ಕೆ. ಅಭಯಚಂದ್ರ ಜೈನ್ : ಅಲ್ಲಿ ಪ್ರತಿಭಟನೆ ಮತ್ತು ಸತ್ಯಾಗ್ರಹವು ನಡೆಯುತ್ತಿದೆ.

ಅಧ್ಯಕ್ಷರು : ನಾನು Zero Hour ನಲ್ಲಿ ಮಾತನಾಡುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ. ಸಮಸ್ಯೆ ಆ ಮೇಲೆ ಎತ್ತಿ. ಈಗ ಎಲ್ಲರೂ ಒಟ್ಟಿಗೆ ಕೇಳುವುದಕ್ಕೆ ಅವಕಾಶವಿಲ್ಲ.

ಶ್ರೀ ಕೆ. ಅಭಯಚಂದ್ರ ಜೈನ್ : ಅಲ್ಲಿ ಪ್ರತಿಭಟನೆಯೂ ಆಗುತ್ತಿದೆ.

ನನ್ನ ಕ್ಷೇತ್ರದಲ್ಲಿ ಪ್ರತಿಭಟನೆಯು ಆಗುತ್ತಿದೆ. ಎಂಎಲ್ಎರವರು ತಪ್ಪು ಮಾಡಿದ್ದಾರೆಂದು ಹೇಳುತ್ತಿದ್ದಾರೆ.,

ಶ್ರೀ ಹೆಚ್.ಗೋಪಾಲ ಭಂಡಾರಿ : ನನ್ನ ಕ್ಷೇತ್ರದಲ್ಲಿಯೂ ಆಗುತ್ತಿದೆ.

ಅಧ್ಯಕ್ಷರು : ಎಲ್ಲರೂ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಮಾತನಾಡಿ. ಇಲ್ಲದೆ ಹೋದರೆ ಬಜೆಟ್ ಮೇಲೆ ಮಾತನಾಡುವಾಗ ಮಾತನಾಡಿ.

ಶ್ರೀ ಕೆ. ಅಭಯಚಂದ್ರ ಜೈನ್ : ನನ್ನ ಕ್ಷೇತ್ರದ ಒಂದು ಭಾಗವನ್ನು ಬಜೆಟ್‌ನಲ್ಲಿ ತಾಲ್ಲೂಕು ಕೇಂದ್ರವಾಗಿ ಮಾಡಿದ್ದಾರೆ. ಅದಕ್ಕಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತಿದ್ದೇನೆ. ಅದರಲ್ಲಿ ಇನ್ನೊಂದು ಭಾಗವಾಗಿರು-ವುದು ಮುಲ್ಕಿ. ಮುಲ್ಕಿಯು ಸ್ವಾತಂತ್ರ್ಯ ಪೂರ್ವದಲ್ಲಿ ತಾಲ್ಲೂಕು ಕೇಂದ್ರವಾಗಿತ್ತು. ದೇಶಪ್ರೇಮಿ ಕಾರ್ನಾಡು ಸದಾಶಿವರಾಯರ ಹುಟ್ಟೂರಾಗಿದೆ. ಕೆನರಾ ಬ್ಯಾಂಕಿನ ಫೌಂಡರ್ ಅಮ್ಮೆಂಬಳ ಸುಬ್ಬರಾಯರ ಹುಟ್ಟೂರು ಆಗಿದೆ. ಶ್ರೀ ಟಿ.ಎ.ಪೈರವರ ಹುಟ್ಟೂರಾಗಿದೆ. ವಿಜಯಾ ಬ್ಯಾಂಕ್‌ನ ಅಧ್ಯಕ್ಷರಾದ ಸುಂದರರಾಮ ಶೆಟ್ಟರವರ ಹುಟ್ಟೂರು ಮುಲ್ಕಿಯಾಗಿದೆ. ಆದ್ದರಿಂದಾಗಿ 53 ವರ್ಷಗಳ ಹಿಂದಿನಿಂದಲೂ ಮುಲ್ಕಿಯು ತಾಲ್ಲೂಕು ಆಗಬೇಕು ಎಂದು ಬೇಡಿಕೆ ಇದೆ, ಅದು ಆಗಲಿಲ್ಲ. ಅದು ಮುಲ್ಕಿಯ ಜನರ ಆಶೋತ್ತರವಾಗಿದೆ. ಆದ್ದರಿಂದ ಇದನ್ನು ತಾಲ್ಲೂಕು ಮಾಡಬೇಕೆಂದು ನಿನ್ನೆಯಿಂದ ಪ್ರತಿಭಟನೆಯು ನಡೆಯುತ್ತಿದೆ. ಸರ್ಕಾರವು ಈ ಬಗ್ಗೆ ದಯಮಾಡಿ ಆಶ್ವಾಸನೆಯನ್ನು ಕೊಡಬೇಕು. ಮುಲ್ಕಿಯನ್ನು ತಾಲ್ಲೂಕು ಮಾಡಿ ಅಲ್ಲಿಯ ಜನತೆಗೆ ನ್ಯಾಯ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿದ್ದು ಸವದಿ : ಮಾನ್ಯ ಅಧ್ಯಕ್ಷರೆ, ನಾನು ಕೇಳುತ್ತೇನೆ.

ಅಧ್ಯಕ್ಷರು : ನೀವು ಮುಲ್ಕಿಯವರಲ್ಲ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಸ್.ಸುರೇಶ್ ಕುಮಾರ್ : ಸನ್ಮಾನ್ಯ ಅಭಾಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಕೆ.ಗೋಪಾಲ ಭಂಡಾರಿಯವರು ಎಂ.ಬಿ.ಪ್ರಕಾಶ್‌ರವರ ವರದಿಯು ಆಧಾರದ ಮೇಲೆ 23 ಪೇಜ್ ಹೆಬ್ರಿ ತಾಲ್ಲೂಕಿನ ಬಗ್ಗೆ ಉಲ್ಲೇಖವಿದೆ ಅದಕ್ಕಾಗಿ ಅದನ್ನು ತಾಲ್ಲೂಕು ಮಾಡಬೇಕೆಂದು ಒಂದು ಮಾತನ್ನು ಪ್ರಸ್ತಾಪ ಮಾಡಿದ್ದಾರೆ. ಶ್ರೀ ಅಭಯಚಂದ್ರ ಜೈನ್‌ರವರು ಅವರು ಹುಟ್ಟಿದ್ದು, ಇವರು ಹುಟ್ಟಿದ್ದು ಅನೇಕ ಮಹನೀಯರುಗಳ ಹೆಸರುಗಳನ್ನು ಹೇಳಿ ಅದಕೋಸ್ಕರ ಮುಲ್ಕಿಯನ್ನು ತಾಲ್ಲೂಕು ಮಾಡಬೇಕೆಂದು ಹೇಳಿದ್ದಾರೆ.

ಶ್ರೀ ಕೆ. ಅಭಯಚಂದ್ರ ಜೇನ್ : ಕಿತ್ತೂರು ರಾಣಿ ಚೆನ್ನಮ್ಮನ ಊರಾಗಿದೆ.

ಶ್ರೀ ಎಸ್.ಸುರೇಶ್ ಕುಮಾರ್ : ಅದು O.K. ನಾನು ತಾವು ಹೇಳಿರುವುದನ್ನು ಕೇಳಿಸಿಕೊಂಡಿದ್ದೇನೆ.

ಅಧ್ಯಕ್ಷರು : ಮಾನ್ಯ ಸಚಿವರು ಹೇಳುವುದಕ್ಕೆ ತಾವು ಅವಕಾಶವನ್ನು ಕೊಡಿ.

ಶ್ರೀ ಕೆ. ಅಭಯಚಂದ್ರ ಜೇನ್ : ಬೆಂಗಳೂರಿನಲ್ಲಿ ಹೈಟೆಕ್ ಆಗಿರುವ ಸದಾಶಿವನಗರ ಕಾರ್ನಾಡು ಸದಾಶಿವರಾಯರ ಹೆಸರಿನಲ್ಲಿರುವಂಥ ನಗರ.

ಅಧ್ಯಕ್ಷರು : ಅಲ್ಲಿ ಒಂದು ಸದಾಶಿವನಗರ ಮಾಡಿಬಿಡಿ !

ಶ್ರೀ ಎಸ್.ಸುರೇಶ್ ಕುಮಾರ್ : ಮೊನ್ನೆ ದಿನ 8ನೇ ತಾರೀಖು ಮಾನ್ಯ ಮುಖ್ಯಮಂತ್ರಿಗಳು ಮುಂಗಡಪತ್ರವನ್ನು ಮಂಡಿಸುವಾಗ 43 ಹೊಸ ತಾಲ್ಲೂಕುಗಳನ್ನು ರಚಿಸುವುದಾಗಿ ಘೋಷಣೆ ಮಾಡಿದ್ದಾರೆ. ಈಗ ಗೋಪಾಲಭಂಡಾರಿಯವರು, ಶ್ರೀ ಅಭಯಚಂದ್ರ ರವರು, ಶ್ರೀ ಟಿ.ಬಿ.ಜಯಚಂದ್ರರವರು, ಈಗ ಎಲ್ಲರನ್ನು ಕೇಳುತ್ತಾ ಹೋದಾರೆ ಎಲ್ಲರೂ ಕೈ ಎತ್ತುತ್ತಾರೆ. ಎಲ್ಲಾ ಹೋಬಳಿಗಳನ್ನು ಕೂಡ ತಾಲ್ಲೂಕು ಮಾಡುವಂತಹ ಪ್ರಸಂಗ ಬರಬಹುದು. ಈಗ ರಾಜ್ಯಪಾಲರ ಭಾಷಣವು ಒಂದು ಇದೆ, ಇದರ ಜೊತೆಗೆ ಬಜೆಟ್ ಮೇಲೆ ಭಾಷಣ ಮಾಡುವುದಕ್ಕೆ ಒಂದು ಅವಕಾಶವಿದೆ. ಅಲ್ಲಿ ಇವರು ಏನು ಪ್ರಸ್ತಾಪ ಮಾಡಿದ್ದಾರೆ ಅದನ್ನು ಕೂಡ ಇವರು ಗಣನೆಗೆ ತೆಗೆದುಕೊಂಡು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಮಾನ್ಯ

ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಈ ಬಗ್ಗೆ ಸೂಕ್ತವಾಗಿ ಉತ್ತರವನ್ನು ಕೊಡುತ್ತಾರೆ.

ಶ್ರೀ ಹೆಚ್.ಗೋಪಾಲ ಭಂಡಾರಿ : ಅವರು ಪಾಸಿಟಿವ್ ಆಗಿ ಉತ್ತರವನ್ನು ಕೊಡಲಿ.

ಶ್ರೀ ಎಸ್.ಸುರೇಶ್ ಕುಮಾರ್ : ಆಯಿತು.

ಅಧ್ಯಕ್ಷರು : ಶ್ರೀ ಯು.ಟಿ.ಖಾದರ್‌ರವರೆ ತಾವು ಕೇಳಿ.

6. ವಿಷಯ : ಆಶಾ ಕಾರ್ಯಕರ್ತರ ವಿವಿಧ ಬೇಡಿಕೆಗಳ ಬಗ್ಗೆ.

ಶ್ರೀ ಯು.ಟಿ.ಖಾದರ್ (ಮಂಗಳೂರು ಉತ್ತರ) : ಮಾನ್ಯ ಅಧ್ಯಕ್ಷರೆ, ಈ ರಾಜ್ಯದ ಪ್ರತಿಯೊಂದು ಗ್ರಾಮದಲ್ಲಿಯೂ ಕೂಡ ಸರ್ಕಾರವು ಆಶಾ ಕಾರ್ಯಕರ್ತರನ್ನು ನೇಮಕ ಮಾಡಿದೆ. ಬಹುಶಃ ಅವರ ಜೀವನವು ಹೇಗಿದೆ ಎಂದು ಹೇಳಿದರೆ ಅವರು ದುಡಿದಿರುವುದಕ್ಕೆ ಏನಾದರೂ ಸಿಕ್ಕಬೇಕದರೆ ಯಾರು ಇವತ್ತು ಗರ್ಭಿಣಿ ಸ್ತ್ರೀಯರು ಇದ್ದಾರೆ ಅವರನ್ನು ಪ್ರಪ್ರಥಮವಾಗಿ ಪ್ರಾರಂಭದಿಂದ 9 ತಿಂಗಳವರೆಗೆ ನೋಡಿಕೊಂಡು ಅವರಿಗೆ ಮತ್ತೆ ಹೆರಿಗೆಯಾದ ನಂತರ ಒಂದು ಮಗುವಿಗೆ ರೂ.200.00 ಗಳು ಸಿಗುವಂತಹದ್ದು. ಮತ್ತು ಮಗುವನ್ನು ಒಂದು ವರ್ಷದ ನಂತರ ಇಂಜಕ್ಷನ್ ತೆಗೆದುಕೊಳ್ಳುವುದಕ್ಕೆ ಹೋದ ನಂತರ ಮತ್ತೆ ಅದಕ್ಕೆ 100.00 ರೂಪಾಯಿಗಳು ಸಿಗುವಂತಹದ್ದು. ಅದೇ ರೀತಿಯಾಗಿ ಬಾಣಂತಿಯರಿಗೆ 40 ದಿವಸಗಳು ಆದನಂತರ ಮತ್ತೆ ನೋಡಿಕೊಳ್ಳಲು 100.00 ರೂಪಾಯಿಗಳನ್ನು ಕೊಡುವಂತಹದ್ದು. ಈ ರೀತಿಯಾಗಿ incentive ಕೊಡುವ ಮೂಲಕ ಅವರು ಜೀವನ ಸಾಗಿಸುವಂತಹ ಪರಿಸ್ಥಿತಿ ಇದೆ. ಅವರಿಗೆ ಯಾವುದೇ ಸೂಕ್ತವಾದಂತಹ ಬೇಸಿಕ್ ಗೌರವಧನವೂಕೂಡ ಇಲ್ಲ. ಇದರಿಂದ ಅವರಿಗೆ ಎಷ್ಟು ಕಷ್ಟವಾಗುತ್ತದೆ ಎಂದು ನಾವು ಆಲೋಚನೆಯನ್ನು ಮಾಡಬೇಕಾಗಿದೆ. ನಾವು ಹೆಣ್ಣು ಮಕ್ಕಳಿಗೆ ಅಲ್ಲಿ ಕೆಲಸವನ್ನು ಕೊಡುತ್ತೇವೆ. ಅವರುಗಳು ಗ್ರಾಮ ಗ್ರಾಮಕ್ಕೆ ನಡೆದುಕೊಂಡು ಹೋಗಬೇಕಾಗಿರುತ್ತದೆ. ಗ್ರಾಮಕ್ಕೆ ಹೋಗುವುದಕ್ಕೆ ಸರಿಯಾದ ವ್ಯವಸ್ಥೆಗಳು ಇರುವುದಿಲ್ಲ. ಬೆಳಿಗ್ಗೆಯಿಂದ ಸಂಜೆಯ ತನಕ ಒಂದೊಂದು ಮನೆಗೆ ಹೋಗಬೇಕಾದರೆ ನಡೆದುಕೊಂಡು ಹೋಗುವಂತಹ